ಕುಂಕುಮ, ಹಣೆಬೊಟ್ಟು, ಬಿಂದಿ, ಸ್ಟಿಕ್ಕರ್ ಹೀಗೆ ವಿವಿಧ ನಾಮಾವಳಿ ಅಂಟಿಸಿಕೊಂಡಿರುವ ಸಿಂಧೂರದ 'ಪ್ರಭಾವಳಿ' ಅಷ್ಟಿಷ್ಟಲ್ಲ. ಸಕಲ ವಸ್ತ್ರಾಭರಣಧಾರಿ ಹೆಣ್ಣುಮಗಳ ಮುಖದ ಕಳೆ ತುಂಬುವುದು ಪುಟ್ಟ ಕುಂಕುಮದಿಂದಲೇ.

■ ಸುಮಾ ಬಿ.

# ಸಿಂಧೂರ ಸೌಂದರ್ಯ



ದುಬಾರಿ ಬೆಲೆಯ ರೇಷ್ಮೆ ಸೀರೆ, ಎತ್ತಿ ಕಟ್ಟಿದ ತುರುಬಿಗೆ ಮಲ್ಲಿಗೆ ದಂಡೆ, ಕತ್ತಿಗೆ ಕುಂದನ್, ಮೀನಾಕ್ಷಿ ಆಭರಣ, ಕೈತುಂಬಾ ಗಾಜಿನ ಬಳೆ, ಮಧ್ಯೆ ಮುತ್ತಿನ ಬಳೆಗಳ ಸಿಂಗಾರ, ವಜ್ರದ ಮೂಗುತಿ, ಹರಳುಗಳಿಂದ ಕೂಡಿದ ಅಂಗೈಯಗಲದ ಬೈತಲೆ ಬೊಟ್ಟು, ಅತ್ತಿಂದಿತ್ತ ಓಲಾಡುವ ಜುಮುಕಿಯ ಒನಪು... ಮದುಮಗಳ ಸಿಂಗಾರಕ್ಕೆ, ಅಂದ ಚಂದಕ್ಕೆ ಇನ್ನೇನು ಬೇಕು? ಆದರೂ ಮುಖದ ಸೌಂದರ್ಯ ಕಳೆಗುಂದಬಾರದಲ್ಲಾ. ಬ್ಯೂಟಿಷಿಯನ್ ಮದುಮಗಳ ಮೇಕಪ್ ಪೂರ್ತಿ ಮುಗಿದ ಬಳಿಕ ಕಡೆಯದಾಗಿ ಹಣೆಗೆ ಸಿಂಧೂರ ಇಟ್ಟಳು. ಆಗ ಎಲ್ಲರ ಮುಖದಲ್ಲೂ ಹೊಳಪು. 'ಇದುವರೆಗೂ ಕಾಣೆಯಾಗಿದ್ದ ಮುಖದ ಕಳೆ ಈಗ ಬಂದಿತು' ಎಂದು ಅಲ್ಲೇ ಇದ್ದ ಅಜ್ಜಿಯೊಬ್ಬರು ಮುಗುಳ್ನಕ್ಕರು. ಸಿಂಧೂರದ ಮಹಿಮೆಯೇ ಅಂಥದ್ದು.

ಕುಂಕುಮ, ಹಣೆಬೊಟ್ಟು, ಬಿಂದಿ, ಸ್ಟಿಕ್ಕರ್ ಹೀಗೆ ವಿವಿಧ ನಾಮಾವಳಿ ಅಂಟಿಸಿಕೊಂಡಿರುವ ಸಿಂಧೂರದ 'ಪ್ರಭಾವಳಿ' ಅಷ್ಟಿಷ್ಟಲ್ಲ. ಸಕಲ ವಸ್ತ್ರಾಭರಣಧಾರಿ ಹೆಣ್ಣುಮಗಳ ಮುಖದ ಕಳೆ ತುಂಬುವುದು ಪುಟ್ಟ ಕುಂಕುಮದಿಂದಲೇ. ಹಾಗೇ ನಿರಾಭರಣ ಸುಂದರಿಯ ಸೌಂದರ್ಯ ಹೆಚ್ಚಿಸಲೂ ಸಿಂಧೂರದ ನಂಟು ಬೇಕು. ಸೀರೆ, ಗಾಗ್ರಾ, ಲೆಹೆಂಗಾ, ಕುರ್ತಾ, ಅನಾರ್ಕಲಿ, ಪ್ಯಾಂಟ್‌ಶರ್ಟ್, ಮ್ಯಾಕ್ಸಿ ಹೀಗೆ ಸಾಂಪ್ರದಾಯಿಕ, ಆಧುನಿಕ, ಪಾಶ್ಚಿಮಾತ್ಯ ಯಾವುದೇ ಉಡುಪಿರಲಿ ಹಣೆಗೆ ಸಿಂಧೂರದ ನಂಟು ಬೇಕೇ ಬೇಕು. ಈಗಂತೂ ಮುಖದ ಗಾತ್ರ, ಆಕಾರ, ವಿನ್ಯಾಸಗಳಿಗೆ ತಕ್ಕಂತೆ ವೈವಿಧ್ಯಮಯ ಬಿಂದಿಗಳು ಲಭ್ಯ ಇವೆ. ಚಿಕ್ಕ ಬಿಂದುವಿನಿಂದ ಹಿಡಿದು ದೊಡ್ಡದಾದ ಸ್ಟಿಕ್ಕರ್‌ಗಳು ಇವೆ. ನಮಗ್ಯಾವುದಿಷ್ಟವೋ, ಮುಖಕ್ಕೆ ಯಾವುದು ಹೊಂದಿಕೆಯಾಗುತ್ತದೋ ಅದನ್ನು ಧರಿಸಿ ಬೀಗಬಹುದು.

ಭಾರತೀಯ ಹಿಂದೂ ಸಂಸ್ಕೃತಿಯ ಭಾಗವೇ ಆಗಿರುವ ಕುಂಕುಮವನ್ನು ಅನೇಕ ವಿದೇಶಿಗರೂ ಇಷ್ಟಪಟ್ಟು ಅಪ್ಪಿಕೊಂಡಿದ್ದಾರೆ. ಭಾರತದ ಪ್ರವಾಸ ಕೈಗೊಂಡ ಅನೇಕ ಮಹಿಳೆಯರು ಹಣೆಗೆ ಕುಂಕುಮ ಇಟ್ಟುಕೊಂಡು ಹೆಮ್ಮೆಪಟ್ಟುಕೊಂಡಿದ್ದಾರೆ. ಪಾಶ್ಚಿಮಾತ್ಯ ಗಾಯಕಿಯರು, ನಟಿಯರು, ಗಣ್ಯರ ಪತ್ನಿಯರು ಕುಂಕುಮ ಇಟ್ಟು ಪುಳಕಗೊಂಡಿದ್ದಾರೆ.

### ಕೆಂಪಷ್ಟೇ ಕುಂಕುಮವಲ್ಲ

ಕುಂಕುಮವೆಂದ ಕೂಡಲೇ ಥಟ್ಟನೆ ಸ್ಮೃತಿಪಟಲದಲ್ಲಿ ಸುಳಿಯುವ ಬಣ್ಣ ಕೆಂಪು. ಫ್ಯಾಷನ್ ಜಗತ್ತಿನಲ್ಲಿ ಕೆಂಪಷ್ಟೇ ಈಗ ಕುಂಕುಮವಾಗಿ ಉಳಿದಿಲ್ಲ. ನಾನಾ ಬಣ್ಣ ಪೂಸಿಕೊಂಡು, ಹೊಳಪು ಹೆಚ್ಚಿಸಿಕೊಂಡು ಲಲನೆಯರ ಹಣೆಯ ಮೇಲೆ ನಲಿದಾಡುತ್ತಿದೆ. ಬೆರಳಿನಷ್ಟು ಅಗಲದ ಬೊಟ್ಟಲ್ಲದಿದ್ದರೂ ಸೂಜಿಯಷ್ಟು ತೆಳ್ಳನೆಯ ಐಲೈನರ್ ಎಳೆದರೂ ಸಾಕು ಮುಖದ ಅಂದವೇ ಬದಲಾಗುತ್ತದೆ. ಈಗಿನ ಬಹುತೇಕ ಯುವತಿಯರು ಚಿಕ್ಕದಾದ, ತೆಳ್ಳನೆಯ, ಉದ್ದನೆ ಬೊಟ್ಟನ್ನು ಅಪ್ಪಿಕೊಳ್ಳುತ್ತಾರೆ. ಕಚೇರಿ ಕೆಲಸಕ್ಕೆ ಹೋಗುವ ವನಿತೆಯರು, ಶಾಲೆ, ಕಾಲೇಜಿಗೆ ಹೋಗುವ ಯುವತಿಯರಿಗೆ ಐಲೈನರ್‌ನ ನಂಟೇ ಹೆಚ್ಚು. ಉದ್ದನೆ ಗೆರೆ ಎಳೆದುಕೊಂಡು ಕೆಳಭಾಗದಲ್ಲಿ ಸಣ್ಣ ಬಿಳಿ ಚುಕ್ಕೆ ಇಟ್ಟುಕೊಂಡರೆ ಬೊಟ್ಟಿನ

